
# 2030ಕ್ಕೆ ಬೇಕಿಲ್ಲ ಕೀಬೋರ್ಡ್, ಮೌಸ್

■ ಶಶಿಕುಮಾರ್ ಸಿ.

ತಂತ್ರಜ್ಞಾನದ ಕವಲುಗಳು ಎಲ್ಲೆಡೆ ಚಾಚಿಕೊಳ್ಳುತ್ತಿವೆ. ಭವಿಷ್ಯದ ತಂತ್ರಜ್ಞಾನವು ಮನುಷ್ಯನ ಊಹೆಗೂ ನಿಲುಕದಂತೆ ಬದಲಾವಣೆ ತರಲಿದೆ. ವೇಗವಾಗಿ ಓಡುತ್ತಿರುವ ತಂತ್ರಜ್ಞಾನದ ಹಿಂದೆ ಟೆಕ್ ದೈತ್ಯ ಕಂಪನಿಯಾದ ಮೈಕ್ರೊಸಾಫ್ಟ್, ‘ವಿಂಡೋಸ್ 2030 ವಿಶನ್’ ಎಂಬ ಓಟವನ್ನು ಆರಂಭಿಸಿದೆ. ಈ ವಿಶನ್, ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್ ಬಳಕೆಯ ವಿಧಾನವನ್ನು ಮತ್ತಷ್ಟು ಸುಲಭಗೊಳಿಸಲಿದೆ.




ಮೌಸ್, ಕೀಬೋರ್ಡ್ ಇಲ್ಲದೆಯೇ ಲ್ಯಾಪ್‌ಟಾಪ್ ಬಳಸಲು ಸಾಧ್ಯವೇ? ಅಸಾಧ್ಯವಾದುದ್ದೇನಲ್ಲ! ಮೈಕ್ರೊಸಾಫ್ಟ್ ಅಂದುಕೊಂಡಂತೆ ಆದಲ್ಲಿ 2030ರ ವೇಳೆಗೆ ಇದು ಸಾಧ್ಯವಾಗಬಹುದು.

ಜನಜೀವನ ಈಗ ಹೈಟೆಕ್ ಆಗಿ ಬದಲಾಗುತ್ತಿದೆ. ಅವರು ಬಳಸುತ್ತಿರುವ ಸಾಧನಗಳೂ ಹೈಟೆಕ್‌ಗೆ ಅಪ್‌ಡೇಟ್ ಆಗುತ್ತಿವೆ. ಕೃತಕ ಬುದ್ಧಿಮತ್ತೆ (ಎಐ) ಅಸ್ತಿತ್ವಕ್ಕೆ ಬಂದ ನಂತರವಂತೂ ಇದರ ವೇಗ ಇನ್ನಷ್ಟು ಹೆಚ್ಚಾಗಿದೆ. ಇದಕ್ಕೆ ತಕ್ಕಂತೆ ವಿಂಡೋಸ್ ಸಹ ಅಪ್‌ಡೇಟ್ ಆಗುತ್ತಿದೆ. ಡೆಸ್ಕ್‌ಟಾಪ್ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗಳಲ್ಲಿ ವಿಂಡೋಸ್ ಬಳಕೆ ಅಗ್ರಸ್ಥಾನದಲ್ಲಿದೆ. ಇದು ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸುವ, ಬಳಕೆಸ್ನೇಹಿಯಾದ ಕಾರ್ಯಾಚರಣ ವ್ಯವಸ್ಥೆ (ಒಎಸ್) ಆಗಿಯೂ ಗುರುತಿಸಿಕೊಂಡಿದೆ. ಮೈಕ್ರೊಸಾಫ್ಟ್ ಈಚೆಗೆ ‘ವಿಂಡೋಸ್ 2030 ವಿಶನ್’ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ಇದು ತಂತ್ರಜ್ಞಾನದ ಹೊಸ ಸಾಧ್ಯತೆಗೆ ಮುನ್ನುಡಿ ಬರೆದಿದೆ.

ಈಚೆಗೆ ಈ ಬಗ್ಗೆ ಮಾತನಾಡಿರುವ ಮೈಕ್ರೊಸಾಫ್ಟ್‌ನ ಕಾರ್ಪೊರೇಟ್ ಉಪಾಧ್ಯಕ್ಷ ಡೇವಿಡ್ ವೆಸ್ಟನ್, ‘2030ರ ವೇಳೆಗೆ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್ ಬಳಸುವ ವಿಧಾನವು ಸಂಪೂರ್ಣವಾಗಿ ಬದಲಾಗುತ್ತದೆ’ ಎಂದಿದ್ದಾರೆ. ‘ಬದಲಾದ ಸಮಯದಲ್ಲಿ, ಡಿಸ್‌ಪ್ಲೇ ಮೇಲೆ ಕರ್ಸರ್ ಸರಿಸುವ ಅಥವಾ ಕೀಬೋರ್ಡ್‌ನಲ್ಲಿ ಟೈಪ್ ಮಾಡುವ ಅಗತ್ಯವಿಲ್ಲ. ನೇರವಾಗಿ ಕಂಪ್ಯೂಟರ್‌ನೊಂದಿಗೆ ಸಂವಹನ ನಡೆಸುವ ಮೂಲಕ, ಕೈ ಸನ್ನೆ ಅಥವಾ ಮಾನಿಟರ್ ನೋಡುವ ಮೂಲಕ ಮೌಸ್ ಹಾಗೂ ಕೀಬೋರ್ಡ್ ಬಳಸಿ ಮಾಡುವ ಕೆಲಸಗಳನ್ನು ಮಾಡಬಹುದು’ ಎಂದಿದ್ದಾರೆ ಅವರು.

ಮೌಸ್ ಮತ್ತು ಕೀಬೋರ್ಡ್ ರಹಿತವಾಗಿ ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್ ಬಳಸುವುದು ಸದ್ಯದ ಮಟ್ಟಿಗೆ ಊಹೆಗೂ ನಿಲುಕದ್ದು. ಭವಿಷ್ಯವು, ಅಂದರೆ 2030ರ ವೇಳೆಗೆ, ಕೀಬೋರ್ಡ್ ಅಥವಾ ಮೌಸ್ ಇಲ್ಲದ ಲ್ಯಾಪ್‌ಟಾಪ್‌ಗಳು ಹಾಗೂ ಡೆಸ್ಕ್ ಕಂಪ್ಯೂಟರ್‌ಗಳಷ್ಟೇ ಮಾರುಕಟ್ಟೆಯಲ್ಲಿ ಲಭ್ಯವಿರಲಿವೆ. ಈ ಲ್ಯಾಪ್‌ಟಾಪ್‌ಗಳು ಧ್ವನಿ ಹಾಗೂ ಸಂಜ್ಞೆಯ ಮೂಲಕ ನಿಖರವಾಗಿ ಕಾರ್ಯನಿರ್ವಹಿಸಲಿವೆ. ಇದಕ್ಕೆ ಪೂರಕವಾಗಿದೆ ‘ಭವಿಷ್ಯದಲ್ಲಿ ಮೌಸ್ ಮತ್ತು ಕೀಬೋರ್ಡ್ ಬಳಕೆ ಅಗತ್ಯವಿರುವುದಿಲ್ಲ’ ಎಂಬ ಡೇವಿಡ್ ವೆಸ್ಟನ್ ಮಾತು.

2030ರ ವೇಳೆಗೆ ಡಿಸ್‌ಪ್ಲೇ ಮೇಲೆ ಕರ್ಸರ್ ಸರಿಸಲು ಮೌಸ್ ಬಳಸುವ ಅಗತ್ಯವಿಲ್ಲ. ಟೈಪಿಸಲು ಮತ್ತು ಇನ್ನಿತರ ಕೆಲಸಕ್ಕೆ ಕೀಬೋರ್ಡ್ ಅಗತ್ಯವೂ ಇಲ್ಲ. ಬದಲಾಗಿ, ಬಳಕೆದಾರರು ನೇರವಾಗಿ ಕಂಪ್ಯೂಟರ್‌ನೊಂದಿಗೆ ಸಂವಹನ ನಡೆಸಲು, ಕೈ ಸಂಜ್ಞೆಗಳನ್ನು ಮಾಡಲು ಅಥವಾ ಮಾನಿಟರ್ ಅನ್ನು ನೋಡುವ ಮೂಲಕ ಆಜ್ಞೆಗಳನ್ನು ನೀಡಲು ಸಾಧ್ಯವಾಗುತ್ತದೆ. ಭವಿಷ್ಯದ ವಿಂಡೋಸ್ ಬಹುರೂಪಿಯಾಗಿರಲಿದೆ. ಅಂದರೆ ನೀವು, ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್ ಅನ್ನು ಧ್ವನಿ, ಸನ್ನೆಗಳು ಅಥವಾ ಕಣ್ಣುಗಳಿಂದ ನಿಯಂತ್ರಿಸಬಹುದಾಗಿದೆ.

ಈ ಬಗ್ಗೆ ಮೈಕ್ರೊಸಾಫ್ಟ್ ಇತ್ತೀಚೆಗೆ ಯೂಟ್ಯೂಬ್‌ನಲ್ಲಿ ‘ಮೈಕ್ರೊಸಾಫ್ಟ್ ವಿಂಡೋಸ್ 2030 ವಿಷನ್’ ಎಂಬ ವಿಡಿಯೊ ಬಿಡುಗಡೆ ಮಾಡಿದೆ. ಇದು ಮುಂದಿನ ಐದು ವರ್ಷಗಳಲ್ಲಿ ವಿಂಡೋಸ್ ಅನ್ನು ಹೇಗೆಲ್ಲ ಬಳಸಬಹುದು ಎಂಬುದನ್ನು ವಿವರಿಸುತ್ತದೆ. ಇದು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿತ ಲ್ಯಾಪ್‌ಟಾಪ್‌ಗಳು ಹಾಗೂ ಕಂಪ್ಯೂಟರ್‌ಗಳನ್ನು, ಅವುಗಳನ್ನು ಬಳಸುವ ಮನುಷ್ಯರು ಸುಲಭವಾಗಿ ಸಂವಹನ ನಡೆಸುವುದನ್ನು ತೋರುತ್ತದೆ.

ಡೆಸ್ಕ್‌ಟಾಪ್, ಲ್ಯಾಪ್‌ಟಾಪ್‌ಗಳಲ್ಲಿ ಜನರು ಸ್ನೇಹಿತರನ್ನು ಕಾಣಬೇಕು; ಸ್ನೇಹಿತರಂತೆ ಅವುಗಳೊಂದಿಗೆ ಮಾತನಾಡಬೇಕೆಂಬುದು ಮೈಕ್ರೊಸಾಫ್ಟ್ ಬಯಕೆ. ಅದಕ್ಕಾಗಿ ಶತಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ.

ಕಂಪನಿಯು ಇತ್ತೀಚೆಗೆ ವಿಂಡೋಸ್, ಆಫೀಸ್‌ನಂತಹ ತನ್ನ ಹಲವಾರು ಉತ್ಪನ್ನಗಳಿಗೆ, ಪ್ಲಾಟ್‌ಫಾರ್ಮ್‌ಗಳಿಗೆ ಕೋ–ಪೈಲಟ್ ಎಐ ಚಾಟ್‌ಬಾಟ್ ಅಳವಡಿಸಿಕೊಂಡಿದೆ. ಇದನ್ನು ಬಳಸಿಕೊಂಡು, ಬಳಕೆದಾರರು ‘ಹೇ ಕೋ–ಪೈಲೆಟ್’ ಎಂದು ಹೇಳುವ ಮೂಲಕ ತಮ್ಮ ಕಂಪ್ಯೂಟರ್‌ಗಳೊಂದಿಗೆ ಸಂವಹನ ನಡೆಸಿ ಕೆಲಸ ಮಾಡಬಹುದು. ಇದು ಸಿಸ್ಟಮ್ ಸೆಟ್ಟಿಂಗ್‌ಗಳನ್ನು ಬದಲಾಯಿಸಲು ಅಥವಾ ಇಂಟರ್‌ನೆಟ್‌ನಲ್ಲಿ ಮಾಹಿತಿಯನ್ನು ಹುಡುಕಲು ತುಂಬಾ ಸುಲಭಗೊಳಿಸುತ್ತದೆ. ■

### ಒಮ್ಮೆ ಹೀಗೆ ಊಹಿಸಿಕೊಳ್ಳಿ...

ನೀವು ಮೇಜೊಂದರ ಬಳಿ ಕೂತಿದ್ದೀರಿ. ಅಲ್ಲಿನ ಲ್ಯಾಪ್‌ಟಾಪ್ ಅಥವಾ ಡೆಸ್ಕ್‌ಟಾಪ್ ಕಂಪ್ಯೂಟರ್‌ನ ಮಾನಿಟರ್ ನೋಡುತ್ತಿದ್ದೀರಿ ಎಂದಿಟ್ಟುಕೊಳ್ಳಿ. ಮೈಕ್ರೊಸಾಫ್ಟ್ ಎಡ್ಜ್, ಗೂಗಲ್‌ನ ಕ್ರೋಮ್ ಸೇರಿದಂತೆ ಏನನ್ನಾದರೂ ತೆರೆಯಬೇಕಿದ್ದರೆ ಧ್ವನಿಯ ಮೂಲಕ ಕಮಾಂಡ್ ನೀಡಿ. ಅದನ್ನು ಆಲಿಸುವ ವಿಂಡೋಸ್ ಒಎಸ್, ನೀವು ಬಯಸಿದ್ದನ್ನು ತೆರೆಯುತ್ತದೆ. ಮೌಸ್ ಅನ್ನು ಮುಟ್ಟದೆಯೇ ನಿಮ್ಮ ಕೈ ಬೀಸುವ ಮೂಲಕ ಫೈಲ್ ಅನ್ನು ಮತ್ತೊಂದು ವಿಂಡೋಗೆ ಎಳೆಯಬಹುದು. ಎಐ ಸಹ ಯಾವ ಫೈಲ್ ಅನ್ನು ಉಳಿಸಬೇಕು, ಯಾವ ಅಪ್ಲಿಕೇಷನ್ ಅನ್ನು ನವೀಕರಿಸಬೇಕು ಎಂಬುದನ್ನೂ ನಿಮ್ಮನ್ನು ಕೇಳಿಯೇ ಮುಂದುವರೆಯುತ್ತದೆ. ಯಾವುದಾದರೂ ಅನುಮಾನಾಸ್ಪದ ಲಿಂಕ್ ಸಿಸ್ಟಂಗೆ ತಲುಪಿದ್ದರೆ ಅದನ್ನು ನಿರ್ಬಂಧಿಸಬೇಕು ಎಂಬುದನ್ನು ನೋಟಿಫಿಕೇಷನ್ ಮೂಲಕ ನಿಮಗೆ ತಿಳಿಸುತ್ತದೆ.